**ಓ.ಎಸ್. ನಂಃ 572/2023**

**ಪಿ.ಡಬ್ಲ್ಯೂಃ 1**

**ದಿನಾಂಕ 05.12.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಕೆ.ಆರ್.ಎಸ್. ವಕೀಲರಿಂದಃ**

9. ನಿಡಿ.1(ಬಿ) ಕಡೆಗೆ ಮುಖವಾಗಿ ಗಣೇಶ ಪಾಂಡುರಂಗ ಬಾರ್ ನ ಕಟ್ಟಡದ ಬಾಗಿಲು ಇದೆ ಎಂದರೆ ಸಾಕ್ಷಿಯು 3 ಅಡಿ ಜಾಗವನ್ನು ಬಿಟ್ಟು ನಂತರದಲ್ಲಿ ಸದರಿ ಕಟ್ಟಡದ ಬಾಗಿಲನ್ನು ಇಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ನೀವು ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ನಿಡಿ.1(ಬಿ) ಜಾಗದಲ್ಲಿ ಬಾಗಿಲು ಹಾಕಬಾರದು ಎಂದು ಗಣೇಶ ಪಾಂಡುರಂಗ ಬಾರ್ ನ ಮಾಲೀಕರಿಗೆ ನೋಟಿಸು ಕೊಟ್ಟಿದ್ದೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಗಣೇಶ ಪಾಂಡುರಂಗ ಬಾರ್ ನ ಕಟ್ಟಡದ ಬಾಗಿಲು ಇರಲಿಲ್ಲ ಹಾಗೂ ನಾನು ಈ ದಾವೆಯನ್ನು ಹೂಡಿದ ನಂತರದಲ್ಲಿ ಗಣೇಶ ಪಾಂಡುರಂಗ ಬಾರ್ ನ ಕಟ್ಟಡದ ಬಾಗಿಲು ಇಟ್ಟಿರುತ್ತಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ಯಾವ ದಿನಾಂಕದಂದು ಗಣೇಶ ಪಾಂಡುರಂಗ ಬಾರ್ ನ ಕಟ್ಟಡದ ಬಾಗಿಲು ಇಟ್ಟಿರುತ್ತಾರೆ ಎಂದು ನನಗೆ ಸರಿಯಾಗಿ ನೆನಪಿಲ್ಲ.

10. ಗಣೇಶ ಪಾಂಡುರಂಗ ಬಾರ್ ನ ಕಟ್ಟಡದ ಬಾಗಿಲು ಇಟ್ಟ ನಂತರ ನಾನು ಪೋಲಿಸ್ ಠಾಣೆಗೆ ದೂರನ್ನು ನೀಡಿದ್ದು, ತಕರಾರನ್ನು ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಪೋಲಿಸರು ಹೇಳಿದ ಕಾರಣ ನಾನು ಈ ದಾವೆಯನ್ನು ಹೂಡಿರುತ್ತೇನೆ. ನಮ್ಮ ತಕರಾರನ್ನು ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಪೋಲಿಸರು ಹಿಂಬರಹ ನೀಡಿರುವುದಿಲ್ಲ ಆದರೆ ಮೌಖಿಕವಾಗಿ ಹೇಳಿರುತ್ತಾರೆ. ನಾನು ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿಯೇ ಗಣೇಶ ಪಾಂಡುರಂಗ ಬಾರ್ ನ ಕಟ್ಟಡದ ಬಾಗಿಲು ಇಟ್ಟಿದ್ದರು ಎಂದರೆ ಸರಿಯಲ್ಲ.

11. ನಿಪಿ.10 ರ ದಾಖಲೆಯನ್ನು ದಾವಾ ಆಸ್ತಿಯ ಮಾರಾಟಗಾರರಾದ ಬಸವರಾಜ್ ರವರು ಶ್ರೀನಿವಾಸರವರಿಗೆ ಬರೆದುಕೊಟ್ಟ ಕ್ರಯ ಪತ್ರವಾಗಿರುತ್ತದೆ. 2000 ನೇ ಇಸವಿಯಲ್ಲಿ ನಿಪಿ.10 ರ ದಾಖಲೆ ಆಗಿರುತ್ತದೆ ಎಂದರೆ ಸರಿ. ನಿಪಿ.10 ರ ಅಡಿಯಲ್ಲಿ ಮಾರಾಟ ಮಾಡಿದ ಆಸ್ತಿಯ ಚೆಕ್ಕುಬಂಧಿಯಲ್ಲಿ ಪಶ್ಚಿಮ ದಿಕ್ಕಿಗೆ 15 ಅಡಿ ರಸ್ತೆ ಆದ ನಂತರದಲ್ಲಿ ಪ್ರತಿವಾದಿ ಆನಂದರವರ ಸ್ವತ್ತು ಎಂದು ನಮೂದಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಯ ದಿನಾಂಕ 02.08.2001 ರ ಕ್ರಯ ಪತ್ರದಲ್ಲಿಯು ಸಹ ಪಶ್ಚಿಮ ದಿಕ್ಕಿಗೆ 15 ಅಡಿ ರಸ್ತೆ ಆದ ನಂತರದಲ್ಲಿ ಪ್ರತಿವಾದಿ ಆನಂದರವರ ಸ್ವತ್ತು ಎಂದು ನಮೂದಾಗಿರುತ್ತದೆ ಎಂದರೆ ಸರಿ.

12. ದಾವಾ ಆಸ್ತಿಯ ಮಾರಾಟಗಾರರಾದ ಬಸವರಾಜ್ ರವರು ಬರೆದುಕೊಟ್ಟಿರುವ ಎಲ್ಲಾ ಕ್ರಯ ಪತ್ರಗಳಲ್ಲಿಯು ಸಹ 15 ಅಡಿ ಅಗಲದ ತಿರುಗಾಡುವ ರಸ್ತೆ ಇದೆ ಎಂದು ನಮೂದಿಸಿದ್ದು, ಪ್ರತಿವಾದಿಗೂ ಸಹ ಸದರಿ 15 ಅಡಿ ಅಗಲದ ರಸ್ತೆಯಲ್ಲಿ ತಿರುಗಾಡುವ ಹಕ್ಕು ಇದೆ ಎಂದರೆ ಸರಿಯಲ್ಲ. ನಾನು ನನ್ನ ಅನೂಕೂಲಕ್ಕೆ ತಕ್ಕ ಹಾಗೆ ದಾವಾ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿ ಎ.ಪಿ.ಎಂ.ಸಿ. ಮಾರುಕಟ್ಟೆ ಎಂದು ಸುಳ್ಳಾಗಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 01.12.2023 ರಂದು ಪ್ರತಿವಾದಿ ಮತ್ತು ಅವರ ಕಡೆಯವರು ದಾವಾ ಆಸ್ತಿಗೆ ಬಂದು ತೊಂದರೆ ನೀಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬದಲಾಗಿ ಸರ್ವೇ ನಂಬರ್ 38 ರಲ್ಲಿ ಮಾರಾಟಗಾರರಾದ ಬಸವರಾಜ್ ರವರು ತಿರುಗಾಡಲು ಬಿಟ್ಟಿರುವ 15 ಅಡಿ ಅಗಲದ ರಸ್ತೆಯನ್ನು ಉಪಯೋಗಿಸಲು ನಾನೇ ಪ್ರತಿವಾದಿಗೆ ಅಡ್ಡಿಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಮೇಲೆ ವೈಷ್ಯಮ್ಯದಿಂದ ನಾನು ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**